ನಟರಾಜ್ ಹುಳಿಯಾರ್

# ದೇವರಾಜ ಅರಸು

# ಹಲವು ಕಣ್ಣುಗಳು ಕಂಡ ಕಲರ್‌ಫುಲ್ ಪೈಲ್ವಾನ್!

ಇಪ್ಪತ್ತನೆಯ ಶತಮಾನದ ಕೊನೆಗೆ 'ಸಹಸ್ರಮಾನದ ವ್ಯಕ್ತಿ'ಗಳನ್ನು ಆಯ್ಕೆ ಮಾಡುವ ಸಡಗರ ಮಾಧ್ಯಮಗಳಲ್ಲಿ ಶುರುವಾಗಿತ್ತು. ಇಂಥ ಟ್ರೆಂಡಿ ಆಯ್ಕೆಗಳ ಕಡೆಗೆ ಒಲವಿರದ ಪಿ. ಲಂಕೇಶರು ಕೂಡ ಕರ್ನಾಟಕದ ಮಟ್ಟಿಗೆ 'ಸಹಸ್ರಮಾನದ ವ್ಯಕ್ತಿ' ಯಾರು ಎಂದು ಹುಡುಕತೊಡಗಿದರು. ಅವರ ಆಯ್ಕೆ ಕರ್ನಾಟಕದ ಎರಡು ಶ್ರೇಷ್ಠ ವ್ಯಕ್ತಿತ್ವಗಳಾದ ಬಸವಣ್ಣ ಹಾಗೂ ದೇವರಾಜ ಅರಸರ ಸುತ್ತ ಬಂದು ನಿಂತಿತು. ಕೊನೆಗೆ, ಕರ್ನಾಟಕದ ಸಾಮಾಜಿಕ–ರಾಜಕೀಯ–ಆರ್ಥಿಕ ಬದುಕಿನಲ್ಲಿ ನಿರ್ಣಾಯಕ ಬದಲಾವಣೆಗೆ ಕಾರಣರಾದ 'ದೇವರಾಜ ಅರಸು ಕರ್ನಾಟಕದ ಸಹಸ್ರಮಾನದ ವ್ಯಕ್ತಿ' ಎಂಬ ನಿಲುವಿಗೆ ಲಂಕೇಶರು ಬಂದರು. ಲಂಕೇಶರಿಂದ ಪತ್ರಿಕೋದ್ಯಮದ ಪಾಠಗಳನ್ನು ಕಲಿತ ಬಸವರಾಜು ಮೇಗಲಕೇರಿ ಇದೀಗ 'ನಮ್ಮ ಅರಸು' ಎಂಬ 580 ಪುಟಗಳ ಬೃಹತ್ ಪುಸ್ತಕವನ್ನು ರೂಪಿಸಿದ್ದಾರೆ. 2015ರಲ್ಲಿ ಅರಸು ಶತಮಾನೋತ್ಸವದ ಸಂದರ್ಭದಲ್ಲಿ, ಆನಂತರದ ವರ್ಷಗಳಲ್ಲಿ ಅರಸು ಅವರ ಒಡನಾಡಿಗಳು, ಅಭಿಮಾನಿಗಳು, ಹಿತಶತ್ರುಗಳು ಈ ಎಲ್ಲರ ನೆನಪು, ನಿರೂಪಣೆಗಳನ್ನು ಆಧರಿಸಿದ ಪುಸ್ತಕ ಇದು.

ರಾಜಕೀಯದಲ್ಲಿರುವ ಬಹುತೇಕರು ಸಾರ್ವಜನಿಕವಾಗಿಯಾಗಲೀ, ಖಾಸಗಿಯಾಗಿಯಾಗಲೀ ಸತ್ಯ ನುಡಿಯಲು ಸಿದ್ಧವಿರದ ಈ ಕಾಲದಲ್ಲಿ ಅನೇಕ ವೃತ್ತಿ ರಾಜಕಾರಣಿಗಳು ಹಾಗೂ ಇನ್ನಿತರ ವಲಯಗಳ ಚಿಂತಕರ ನೆನಪುಗಳನ್ನು ಆಧರಿಸಿದ ಈ ಪುಸ್ತಕದಲ್ಲಿ ಸ್ವಾತಂತ್ರ್ಯೋತ್ತರ ಇಂಡಿಯಾದ, ಮುಖ್ಯವಾಗಿ ಕರ್ನಾಟಕದ ರಾಜಕೀಯ–ಸಾಮಾಜಿಕ ಚರಿತ್ರೆಯೂ ಮೂಡತೊಡಗುತ್ತದೆ. ಇತಿಹಾಸಲೇಖನ ಮಾಡುವ ವಿದ್ವಾಂಸರಿಗೆ ಬೇಕಾದ ಸಮೃದ್ಧ ವಿವರಗಳೂ, 'ಅಧಿಕೃತ' ಚರಿತ್ರೆಯನ್ನು ಬರೆಯುವವರಿಗೆ ಸಾಮಾನ್ಯವಾಗಿ ಸಿಕ್ಕದ ವಿದ್ಯಮಾನಗಳೂ ಇಲ್ಲಿವೆ.

ಇಂಥ ಪುಸ್ತಕಗಳನ್ನು ಬರೆಯುವಾಗ ದೊರೆಯುವ ಸ್ವಾತಂತ್ರ್ಯ ಹಾಗೂ ಎದುರಾಗುವ ಬಿಕ್ಕಟ್ಟುಗಳೆರಡೂ ಈ ಪುಸ್ತಕದಲ್ಲಿ ಕಾಣುತ್ತವೆ. ತೀರಿಕೊಂಡ ದೊಡ್ಡ ರಾಜಕಾರಣಿಯೊಬ್ಬನನ್ನು ಹೊಗಳಿ ಅಮರರಾಗಲು ವೃತ್ತಿ ರಾಜಕಾರಣಿಗಳು ತುದಿಗಾಲಿನಲ್ಲಿರುತ್ತಾರೆ. ಅವರ ನಡುವೆಯೂ ಕೊಂಚ ಸೂಕ್ಷ್ಮವಾದ ರಾಜಕಾರಣಿಗಳು, ಚಿಂತಕರು ಸಾಧ್ಯವಾದಷ್ಟೂ ಸತ್ಯ ಹೇಳಲು ಪ್ರಯತ್ನಿಸುತ್ತಿರುತ್ತಾರೆ. ಆದರೆ, ಚರಿತ್ರೆಗೆ ಸಂದ ವ್ಯಕ್ತಿಯ ಹಾಗೂ ಆ ಕಾಲದ ಘಟನಾವಳಿಗಳನ್ನು ಕುರಿತು ಮಾತಾಡುವ ಎಲ್ಲರಿಗೂ ಸತ್ಯಬದ್ಧತೆ ಹಾಗೂ ನಿಷ್ಠುರತೆ ಇರುತ್ತದೆಂದು ಹೇಳಲಾಗದು;